
SERVICE ABOVE SELF



Rotary

विश्वमित्रः

# ವಿಶ್ವಮಿತ್ರ

# VISHWAMITHRA

Weekly House Bulletin of Rotary Club Shimoga, R.I. Dist. 3182

Rotary THE MAGIC OF ROTARY 2024-25

Rtn. Stephanie A. Urchick
RI President 2024-25

Rtn. CA Dev Anand
District Governor 2024-25

Rtn. K. Sooryanarayana Udpa
President, Mob: 99009 66114

Rtn. N.G. Usha
Secretary, Mob : 81975 92278

Rtn. M. Madhavachar
Bulletin Editor, Mob: 98862 73495

We meet every Wednesday at 6.45p.m. at Rotary Youth Centre, Sowlanga Road, L.B.S.Nagar, Shivamogga- 577 204

ಸಂಪುಟ – 67 ಸಂಚಿಕೆ –17 ದಿನಾಂಕ : 06–11–2024


## ದಿನಾಂಕ: 06.11.2024 ರ ವಾರದ ಸಭೆಯ ವರದಿ

**ದಿನಾಂಕ: 06.11.2024 ರಂದು ನಮ್ಮ ರೋಟರಿಯಲ್ಲಿ ಪ್ರಥಮ ಬಾರಿಗೆ ಕನ್ನಡ ರಾಜ್ಯೋತ್ಸವದ ಪ್ರಯುಕ್ತ ದೂರದರ್ಶನ ಚಂದನ ವಾಹಿನಿಯಲ್ಲಿ ಪ್ರಸಾರವಾಗುವ 'ಥಟ್ ಅಂತ ಹೇಳಿ' ಕಾರ್ಯಕ್ರಮದಂತೆ "ಫಟ್ ಅಂತ ಹೇಳಿ" ಎಂಬ ವಿನೂತನ ರಸಪ್ರಶ್ನೆ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮವನ್ನು ನಮ್ಮ ಕ್ಲಬ್‌ನ ನೂತನ ಸದಸ್ಯರಾದ ರೊ. ವಿ. ಶ್ರೀನಿವಾಸ್ ಮತ್ತು ಶ್ರೀಮತಿ ನಾಗರತ್ನ ದಂಪತಿಗಳು ನಡೆಸಿಕೊಟ್ಟರು. (ರೊ. ವಿ ಶ್ರೀನಿವಾಸ್ ಹಾಗೂ ಶ್ರೀಮತಿ ನಾಗರತ್ನರವರು ದೂರದರ್ಶನದ ಚಂದನ ವಾಹಿನಿಯಲ್ಲಿ ನಡೆಯುವ ಈ ಕಾರ್ಯಕ್ರಮದಲ್ಲಿ ಭಾಗವಹಿಸಿ ಅನುಭವ ಪಡೆದಿದ್ದರು ಹಾಗೂ ವಿಜೇತರಾಗಿದ್ದರು ಎಂಬುದು ಸಂತಸದ ವಿಷಯ) ಸಭಾ ವೇದಿಕೆಯಲ್ಲಿ ಮುಖ್ಯಅತಿಥಿ ರೊ. ವಿ. ಶ್ರೀನಿವಾಸ್, ಅಧ್ಯಕ್ಷರಾದ ರೊ.ಕೆ. ಸೂರ್ಯನಾರಾಯಣ ಉಡುಪರು ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ವೇದಿಕೆಯಲ್ಲಿದ್ದರು. ರಸಪ್ರಶ್ನೆ ಕಾರ್ಯಕ್ರಮಕ್ಕೆ ಪಿಪಿಟಿ ಮೂಲಕ ಪ್ರಶ್ನೆಗಳನ್ನು ಕೇಳಲು ಬೇರೆಯೇ ವೇದಿಕೆ ಸಿದ್ಧಪಡಿಸಿದ್ದು, ಅಲ್ಲಿ ನಮ್ಮ ಸದಸ್ಯರುಗಳು ಕಾರ್ಯಕ್ರಮದಲ್ಲಿ ಪಾಲ್ಗೊಂಡು ಸಂತಸ ಪಟ್ಟರು. ಕಾರ್ಯಕ್ರಮ ಚೆನ್ನಾಗಿ ಮೂಡಿ ಬಂದಿತು.**

ಕನ್ನಡ ರಾಜ್ಯೋತ್ಸವದ ಅಂಗವಾಗಿ ಶ್ರೀ ಜಿ. ಸತ್ಯನಾರಾಯಣ ರವರಿಂದ ಕನ್ನಡದ ಹಾಡು "ಹೊತ್ತಿತೋ ಹೊತ್ತಿತು ಕನ್ನಡದ ದೀಪ" ಎಂಬ ಸಿದ್ದಯ್ಯ ಪುರಾಣಿಕ ರಚಿತ ಹಾಡಿನ ಗೀತೆಯೊಂದಿಗೆ ಪ್ರಾರ್ಥನೆಯಾಯಿತು. ರೊ. ಗಾಯತ್ರಿ ಸುಮತೀಂದ್ರರವರು ಸರ್ವರನ್ನು ಸ್ವಾಗತಿಸಿದರು. ಕಾರ್ಯದರ್ಶಿ ರೊ.ಎನ್. ಜಿ. ಉಷಾರವರು ಪ್ರಕಟಣೆ ನೀಡಿದರು. ಜೊತೆಗೆ ಅಂದಿನ ಮುಖ್ಯ ಅತಿಥಿಗಳಾದ ರೊ. ವಿ. ಶ್ರೀನಿವಾಸರವರ ಪರಿಚಯವನ್ನು ಕೂಡ ಮಾಡಿದರು. ಇದೇ ಸಂದರ್ಭದಲ್ಲಿ ಕ್ಲಬ್‌ನ ಖರ್ಚುಗಳಿಗೆ ಅನುಕೂಲವಾಗಲು ರೊ.ಎಸ್. ಮಂಜುನಾಥ್‌ರವರು ರೂ.10,000/– ದೇಣಿಗೆ ನೀಡಿರುವುದಕ್ಕೆ ಅಧ್ಯಕ್ಷರು ತಮ್ಮ ಕೃತಜ್ಞತೆಯನ್ನು ವ್ಯಕ್ತಪಡಿಸಿ ಮತ್ತು ರೊ.ಎಸ್. ಮಂಜುನಾಥರವರ ಹುಟ್ಟುಹಬ್ಬದ ಪ್ರಯುಕ್ತ ನೆನಪಿನ ಕಾಣಿಕೆ ನೀಡಿ ಅಭಿನಂದಿಸಲಾಯಿತು. ಅಲ್ಲದೇ ದಿನಾಂಕ: 30.11.2024 ರಂದು ನಡೆದ ಕೌಟುಂಬಿಕ ಸ್ನೇಹ ಮಿಲನದ ಕಾರ್ಯಕ್ರಮದಲ್ಲಿ ಭೋಜನದ ವ್ಯವಸ್ಥೆಗಾಗಿ ರೊ. ಎಸ್. ಜಿ. ಗೋಪಾಲ್ ಮತ್ತು ರೊ. ಹೆಚ್.ಎಸ್. ಮೋಹನ್‌ರವರು ತಲಾ ರೂ. 5,000/– ದೇಣಿಗೆ ನೀಡಿರುವುದನ್ನು ಪ್ರಕಟಿಸಿ ಅವರನ್ನು ವೇದಿಕೆಗೆ ಬರ ಮಾಡಿಕೊಂಡು ಕೃತಜ್ಞತಾ ಪೂರ್ವಕವಾಗಿ ನೆನಪಿನ ಕಾಣಿಕೆ ನೀಡಲಾಯಿತು.



ನಂತರ ಸಭಾಂಗಣದ ಬಲಭಾಗದಲ್ಲಿ ಅಣಿಗೊಳಿಸಿದ ವಿಶೇಷ ವೇದಿಕೆಯಲ್ಲಿ ಪಿಪಿಟಿ ಮೂಲಕ ರೊ. ವಿ. ಶ್ರೀನಿವಾಸ್ ಮತ್ತು ಶ್ರೀಮತಿ ನಾಗರತ್ನರವರು **'ಪಟ್ ಅಂತ ಹೇಳಿ'** ಕಾರ್ಯಕ್ರಮ ನಡೆಸಿಕೊಟ್ಟರು. ಪ್ರತಿ ಬಾರಿ ನಮ್ಮ ಕ್ಲಬ್‌ನ ಈ ಕೆಳಕಂಡ 3 ಜನ ಸದಸ್ಯರುಗಳು ಭಾಗವಹಿಸಿದ್ದರು.

**ರೊ. ಶ್ರೀಕಾಂತ್ ನಾಡಿಗ್, ರೊ.ಪೇಟೆ ಅಜಯಕುಮಾರ್, ರೊ. ವೆಂಕಟರಮಣ ಜಿ. ಹೆಗಡೆ, ರೊ. ಹೆಚ್.ಎಸ್. ಮೋಹನ್, ರೊ. ನೀತು ದೀಪಕ್, ರೊ. ನಿರ್ಮಲಾ, ರೊ. ಜಗದೀಶ್‌ಕಾಮತ್, ರೊ. ವೀರಣ್ಣ ಎ. ಹುಗ್ಗಿ, ರೊ. ಎಂ.ವಿ. ನಾಗೇಶ್, ರೊ. ಗಾಯತ್ರಿ ಸುಮತೀಂದ್ರ, ರೊ.ಸುನೀತಾ ಶ್ರೀಧರ್, ರೊ.ಎನ್.ಎಸ್. ಶ್ರೀಧರ್, ರೊ. ವಿಜಯಕುಮರ್ ಸಿ., ರೊ. ಟಿ.ಕೆ.ಎಂ. ಭಟ್, ಶ್ರೀಮತಿ ಶ್ರೀದೇವಿ, ಶ್ರೀ ಜಿ. ಸತ್ಯನಾರಾಯಣ್, ರೊ. ವೈ.ವಿ.ವಿ.ಜೋಯ್ಸ್, ರೊ. ಮಲ್ಲಿಕಾ ವಿ.ಜೋಯ್ಸ್.**

**2ನೇ ಪುಟಕ್ಕೆ**

## ಈ ವಾರದ ಸಭೆ




ದಯವಿಟ್ಟು ರೋಟರಿ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ

ಸ್ಥಳ: **ರೋಟರಿ ಯುವ ಕೇಂದ್ರ,** ಸವಳಂಗ ರಸ್ತೆ, ಶಿವಮೊಗ್ಗ

**ಈ ಕೆಳಕಂಡಂತೆ ರೋಟರಿ ಸದಸ್ಯರುಗಳು ಭಾಗವಹಿಸಿ ವಿಜೇತರಾದರು:–**

| | | |
|---|---|---|
| **ರೊ. ವೆಂಕಟರಮಣ ಜಿ. ಹೆಗಡೆ** | **110 ಅಂಕಗಳು** | **– 1ನೇ ಬಹುಮಾನ** |
| **ರೊ. ಎಂ.ವಿ.ನಾಗೇಶ್** | **110 ಅಂಕಗಳು** | **– 1ನೇ ಬಹುಮಾನ** |
| **ರೊ. ಸುನೀತಾ ಶ್ರೀಧರ್** | **100 ಅಂಕಗಳು** | **– 2ನೇ ಬಹುಮಾನ** |
| **ರೊ. ಸಿ. ವಿಜಯಕುಮಾರ್** | **90 ಅಂಕಗಳು** | **– 3ನೇ ಬಹುಮಾನ** |
| **ರೊ. ಎನ್.ಎಸ್. ಶ್ರೀಧರ್** | **90 ಅಂಕಗಳು** | **– 3ನೇ ಬಹುಮಾನ** |
| **ಶ್ರೀಮತಿ ಶ್ರೀದೇವಿ** | **90 ಅಂಕಗಳು** | **– 3ನೇ ಬಹುಮಾನ** |




ಇವರುಗಳಿಗೆ ಬಹುಮಾನಗಳನ್ನು ಮತ್ತು ಭಾಗವಹಿಸಿದವರೆಲ್ಲರಿಗೂ ಪ್ರೋತ್ಸಾಹಕರ ಬಹುಮಾನ ನೀಡಲಾಯಿತು. ಮುಖ್ಯ ಅತಿಥಿಗಳಾದ ರೊ. ವಿ. ಶ್ರೀನಿವಾಸ್ ಮತ್ತು ಶ್ರೀಮತಿ ನಾಗರತ್ನ ದಂಪತಿಗಳಿಗೆ ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳು, ರೊ. ವೀರಣ್ಣ ಎ. ಹುಗ್ಗಿ, ರೊ. ವೈ.ವಿ.ವೆಂಕಟರಮಣ ಜೋಯ್ಸ್, ರೊ. ಸಿ. ವಿಜಯಕುಮಾರ್‌ರವರುಗಳು ಸೇರಿ ಸನ್ಮಾನಿಸಿದರು. ಕಾರ್ಯಕ್ರಮದ ಕೊನೆಯಲ್ಲಿ ರೊ.ಉಷಾ ಎನ್. ಜಿ. ರವರು ವಂದನಾರ್ಪಣೆ ಮಾಡಿದರು. ರಾಷ್ಟ್ರಗೀತೆಯೊಂದಿಗೆ ರೊ. ವೈ.ವಿ. ವೆಂಕಟರಮಣಜೋಯ್ಸ್‌ರವರಿಂದ ಭಾರತ ಮಾತಾಕಿ ಜೈ ಉದ್ಘೋಷದೊಂದಿಗೆ ಸಭೆ ಮುಕ್ತಾಯವಾಯಿತು.

**ಕಾರ್ಯಕ್ರಮದಲ್ಲಿ ಕೇಳಿದ ಕೆಲವೊಂದು ಪ್ರಶ್ನೆಗಳು ನಿಮ್ಮ ಮಾಹಿತಿಗಾಗಿ ಈ ಕೆಳಕಂಡಂತೆ ಕೊಡಲಾಗಿದೆ.**

- ಈ ಗಾದೆಯನ್ನು ಪೂರ್ಣಗೊಳಿಸಿ
  ಕುಳಿತು ಉಂಡರೆ — ಉ : ಕುಡಿಕೆ ಹೊನ್ನು ಸಾಲದು
  ಕೈ ಕೆಸರಾದರೆ — ಉ : ಬಾಯಿ ಮೊಸರು
- ಇದರಲ್ಲಿ ಯಾವುದು ಎಸ್.ಎಲ್. ಭೈರಪ್ಪನವರ ಕೃತಿ ಅಲ್ಲ? — ಉ : ದೇವರು
- ಕರ್ನಾಟಕದ ಗಡಿ ಹಂಚಿಕೊಂಡಿರುವ ರಾಜ್ಯಗಳು — ಉ : 6
- ಗುಡವಿ ಪಕ್ಷಿಧಾಮ ಯಾವ ಜಿಲ್ಲೆಯಲ್ಲಿದೆ। — ಉ : ಶಿವಮೊಗ್ಗ
- ಗೋಕರ್ಣ ಯಾವ ತಾಲೂಕಿನಲ್ಲಿದೆ। — ಉ : ಕುಮಟಾ
- ಅಥಣಿ ಹಾಗೂ ಗೋಕಾಕ್ ಯಾವ ತಾಲೂಕಿನಲ್ಲಿದೆ? — ಉ : ಬೆಳಗಾವಿ
- ಈ ಗಾದೆಯನ್ನು ಪೂರ್ಣಗೊಳಿಸಿ:–
  ಊರೆಲ್ಲಾ ಕೊಳ್ಳೆ ಹೊಡೆದ ಮೇಲೆ — ಉ : ದಿಡ್ಡಿ ಬಾಗಿಲು ಹಾಕಿದ್ರು
- ಯಾವುದು ಕುವೆಂಪುರವರ ಕೃತಿ ಅಲ್ಲ ? — ಉ : ಯಯಾತಿ
- ವಿಸ್ತೀರ್ಣದಲ್ಲಿ ಕರ್ನಾಟಕ ಭಾರತಕ್ಕೆ ಎಷ್ಟನೇ ಸ್ಥಾನದಲ್ಲಿದೆ? — ಉ : 6 ನೇ ಸ್ಥಾನದಲ್ಲಿದೆ.
- ಕನ್ನಡ ವಿಶ್ವ ವಿದ್ಯಾನಿಲಯ ಎಲ್ಲಿದೆ? — ಉ : ಹಂಪಿ
- ಕರ್ನಾಟಕ ವಿಧಾನ ಸಭಾ ಸ್ಥಾನಗಳೆಷ್ಟು? — ಉ : 224
- ಕಬ್ಬಡಿ ಆಟದಲ್ಲಿ ಎಷ್ಟು ಜನರಿರುತ್ತಾರೆ — ಉ : 7+5 ಮೀಸಲು
- ಅಲಮಟ್ಟಿ ಅಣೆಕಟ್ಟು ಯಾವ ನದಿಗೆ ಕಟ್ಟಲಾಗಿದೆ? — ಉ : ಕೃಷ್ಣಾ ನದಿಗೆ
- ಕಂಪ್ಲಿ ಸಿರಗುಪ್ಪ ಯಾವ ಜಿಲ್ಲೆಯಲ್ಲಿದೆ. — ಉ : ಬಳ್ಳಾರಿ
- ಬಿಳಿಯ ಹೊಲದಲ್ಲಿ ಕರಿಯ ಕಾಳು ಕೈಯ್ಯಲ್ಲಿ ಬಿತ್ತುತ್ತಾರೆ. — ಉ : ಪುಸ್ತಕಗಳು
- ಈ ಗಾದೆಯನ್ನು ಪೂರ್ಣಗೊಳಿಸಿ:–
  ದುಡ್ಡೇ ದೊಡ್ಡಪ್ಪ – — ಉ : ವಿದ್ಯ ಅದರಪ್ಪ
- ದುರ್ಗಾಸ್ತಮಾನ ಬರೆದವರು — ಉ : ತ.ರಾ.ಸು.
- ಕರ್ನಾಟಕದ ಲೋಕಸಭಾ ಸ್ಥಾನಗಳೆಷ್ಟು? — ಉ : 28
- ಹಿಡ್ಕಲ್ ಅಣೆಕಟ್ಟು ಯಾವ ನದಿಗೆ ಕಟ್ಟಲಾಗಿದೆ — ಉ : ಘಟಪ್ರಭ
- ಉಳವಿ ಪಕ್ಷಿಧಾಮ — ಉ : ಉತ್ತರ ಕನ್ನಡ
- ಕರ್ನಾಟಕದಿಂದ ರಾಜ್ಯ ಸಭೆಗೆ ಆಯ್ಕೆಯಾಗುವವರ ಸಂಖ್ಯೆ — ಉ : 12
- ಮೈಸೂರು–ಕರ್ನಾಟಕ ರಾಜ್ಯವಾದದ್ದು — ಉ : 1973 ನವೆಂಬರ್ 1
- ಕೂಡ್ಲಿಗಿ ಕೊಟ್ಟೂರು ಯಾವ ಜಿಲ್ಲೆಯಲ್ಲಿದೆ? — ಉ : ವಿಜಯನಗರ
- ಈ ಗಾದೆಯನ್ನು ಪೂರ್ಣಗೊಳಿಸಿ
  ಕುಂಬಳ ಕಾಯಿ ಕಳ್ಳ ಅಂದರೆ — ಉ : ಹೆಗಲು ಮುಟ್ಟಿ ನೋಡಿಕೊಂಡ.
- ದ.ರಾ.ಬೇಂದ್ರೆಯವರು ಕೃತಿಯಲ್ಲದ್ದು — ಉ : ನಿತ್ಯೋತ್ಸವ
- ಗಂಗರ ರಾಜಧಾನಿ ಯಾವುದು? — ಉ : ತಲಕಾಡು
- ವಿಶ್ವೇಶ್ವರಯ್ಯ ತಾಂತ್ರಿಕ ಕಾಲೇಜು ಎಲ್ಲಿದೆ? — ಉ : ಬೆಳಗಾವಿ
- ಕ್ರಿಕೇಟ್ ಮೈದಾನದಲ್ಲಿ ಎಷ್ಟು ಜನರಿದ್ದಾರೆ? — ಉ : 11+2+2









❒ ಸೂಪಾ ಅಣಕಟ್ಟು ಯಾವ ನದಿಗೆ ಕಟ್ಟಲಾಗಿದೆ?
ಉ : ಕಾಳಿ ನದಿ
❒ ಬಾಲ್ಕಿ ಹುಮಾನಾಬಾದ್ ಯಾವ ಜಿಲ್ಲೆಯಲ್ಲಿದೆ?
ಉ : ಬೀದರ್
ಈ ಗಾದೆಯನ್ನು ಪೂರ್ಣಗೊಳಿಸಿ
❒ ಬೀಸೋ ದೊಣ್ಣೆ ತಪ್ಪಿದರೆ
ಉ : ಸಾವಿರ ವರ್ಷ ಆಯಸ್ಸು
❒ ಮರುಳ ಮುನಿಯನ ಕಗ್ಗ ಬರೆದವರಾರು?
ಉ : ಡಿ.ವಿ.ಜಿ.
❒ ಕರ್ನಾಟಕದಲ್ಲಿ ಎಷ್ಟು ಜಿಲ್ಲೆಗಳಿವೆ?
ಉ : 31
❒ ಕರ್ನಾಟಕ ವಿಧಾನ ಪರಿಷತ್ ಸದಸ್ಯರ ಸಂಖ್ಯೆ
ಉ : 75
❒ ಧರ್ಮಸ್ಥಳ ಯಾವ ತಾಲೂಕಿನಲ್ಲಿದೆ?
ಉ : ಬೆಳ್ತಂಗಡಿ
❒ ಗುಂಡ್ಲುಪೇಟೆ ಕೊಳ್ಳೇಗಾಲ ಯಾವ ಜಿಲ್ಲೆಯಲ್ಲಿದೆ?
ಉ : ಚಾಮರಾಜನಗರ
❒ ಗೋಕಾಕ ಜಲಪಾತ ಯಾವ ನದಿಯದು?
ಉ : ಘಟಪ್ರಭಾ
❒ ಅಕ್ಕಮಹಾದೇವಿ ವಿಶ್ವವಿದ್ಯಾನಿಲಯ ಎಲ್ಲಿದೆ?
ಉ : ವಿಜಯಪುರ
❒ ಬಾಗೆಪಲ್ಲಿ ಚಿಂತಾಮಣಿ ಯಾವ ಜಿಲ್ಲೆಯಲ್ಲಿದೆ?
ಉ : ಚಿಕ್ಕಬಳ್ಳಾಪುರ

ಹಾಗೆಯೇ ದೃಶ್ಯವನ್ನು ನೋಡಿ ಉತ್ತರಿಸುವ ಪ್ರಶ್ನೆಗಳು ಹಲವಿದ್ದು ಅದನ್ನೂ ಸಹ ಕೇಳಲಾಯಿತು. ಹೀಗೆ ರೋಟರಿ ಇತಿಹಾಸದಲ್ಲಿ ಇಂಥಹದೊಂದು ರಸಪ್ರಸ್ನೆ ಮೂಡಿ ಬಂದು ಸದಸ್ಯರಿಗೆ ಹಲವಾರು ಮಾಹಿತಿಗಳು ದೊರೆತವು.


















## OCTOBER - 2024
### Meetings and Projects

1) 1-10-24 Elder People Day in Shamadhama
2) 2-10-24 14th Weekly Meeting & Guest Lecture BANDHAVYA
3) 9-10-24 15th Weekly Meeting-Group Discussion Program **'ಹರಟೆ ಕಟ್ಟೆ'**
4) 13-10-24 Attended Zonal Reveiw Meeting
5) 14-10-24 BOD Meeting
6) 16-10-24 16th Weekly Meeting _ TRADERS DAY
7) 23-10-24 17th weekly Meeting - Workplace meeting District Project in MAAX Hospital.
   **Topic** :-
   'Healthy Behaviour for a healthy Heart'
8) 24-10-24 Polio Eradication Day - Joint Club Project
9) 28-10-24 Attended Zonal Cultrual Meet at Shikaripura - 6 Events
10) 29-10-2024 Economic and Community Development project in BBM College
11) 30-10-24 18th week FAMILY MEET Program Light Music by Artist K. Yuvaraj





## ಸಂಪಾದಕೀಯ

### ಕಷ್ಟದಲ್ಲಿಯೂ ಇಷ್ಟದ ಬದುಕು

'ಗಿಡುಗ' ನಮಗೆಲ್ಲ ಗೊತ್ತು. ಅದು ಅಂದಾಜು 70 ವರ್ಷ ಬದುಕುವ ಪಕ್ಷಿ. ಆ ಗಿಡುಗನ ಜೀವನದಲ್ಲಿ ಮಹತ್ವವಾದ ಕಷ್ಟದ ಘಟ್ಟವೊಂದು ಬರುತ್ತದೆ. ಆ ಕಷ್ಟದ ದಾರಿಯಲ್ಲಿ ಗಿಡುಗನ ಮುಂದೆ ಪರಿಹಾರದ ಮೂರು ದಾರಿಗಳು ಕಾಣಸಿಗುತ್ತವೆ. ಎರಡು ಸರಳವಾದ ಮತ್ತು ಇನ್ನೊಂದು ಅತೀ ಕಷ್ಟಕರವಾದ ದಾರಿಗಳು. ಆ ಗಿಡುಗ ಕಷ್ಟದ ದಾರಿಯನ್ನೇ ಆಯ್ಕೆ ಮಾಡಿಕೊಂಡು ತನ್ನ ಕಷ್ಟದಿಂದ ಹೊರಬರುತ್ತದೆ. ಇದೇ ಪಾಠ ಮನುಷ್ಯನು ಅನುಸರಿಸಿದರೆ ಕಷ್ಟಗಳನ್ನು ಗೆದ್ದಂತೆ.

ಗಿಡುಗ ತನ್ನ 70 ವರ್ಷದ ಬದುಕಲ್ಲಿ ನಲವತ್ತು ವರ್ಷ ಬಹಳ ಗಾಂಭೀರ್ಯದಿಂದ ಕಳೆಯುತ್ತದೆ. 40 ವರ್ಷ ಕಳೆಯುತ್ತಿದ್ದಂತೆ ವಯೋಮಾನ ಸಹಜ ಕೆಳಗಿನ ಮೂರು ಸಂಕಷ್ಟಗಳು ಬಂದೆರಗುತ್ತವೆ.

1) ನಲವತ್ತು ವರ್ಷ ಕಳೆಯುತ್ತಿದ್ದಂತೆ ಗಿಡುಗನ ಕಾಲಿನ ಉಗುರುಗಳು ಉದ್ದ ಬೆಳೆದು ಮೃದುವಾಗಿಬಿಡುತ್ತವೆ. ಹೀಗಾಗಿ ಬೇಟೆಯನ್ನು ಗಟ್ಟಿಯಾಗಿ ಕಾಲಿನಿಂದ ಹಿಡಿಯಲು ಕಷ್ಟವಾಗುತ್ತದೆ. ಹಿಡಿದ ಬೇಟೆ ಕಾಲಿನಿಂದ ಜಾರಿ ಹೋಗಲು ಪ್ರಾರಂಭಿಸುತ್ತದೆ.
2) ಗಿಡುಗನ ನೇರವಾಗಿದ್ದ ಕೊಕ್ಕೆಯು ಮಣಿದು ಬಾಗಿಕೊಳ್ಳುತ್ತದೆ. ಹಿಡಿದ ಬೇಟೆಯ ಆಹಾರವನ್ನು ಕುಕ್ಕಿ ಕುಕ್ಕಿ ತಿನ್ನಲು ಸಾಧ್ಯವಾಗದೆ ಸುಸ್ತಾಗಿಬಿಡುತ್ತದೆ. ಉಪವಾಸದ ಅನುಭವ ಬಂದೆರಗುತ್ತದೆ.
3) ಗಿಡುಗನ ಬಲಿಷ್ಠ ರೆಕ್ಕೆಗಳು ವಯಸ್ಸಿನ ಕಾರಣ ಬೆಳೆದು ಭಾರವಾಗಿ ಹಾರಲು ಸಹಕರಿಸದಂತಾಗುತ್ತದೆ. ಹೀಗಾಗಿ ತನ್ನ ಆಹಾರ ಹುಡುಕಿಕೊಂಡು ಹೋಗಲು ಸಾಧ್ಯವಾಗದೆ ಪರದಾಡುವ ಪರಿಸ್ಥಿತಿ ಬಂದೆರಗುತ್ತದೆ. ಆಹಾರವಿಲ್ಲದ ಹಕ್ಕಿ ತಿನ್ನುವ ಸಾಮರ್ಥ್ಯ ಇಲ್ಲವಾಗುತ್ತದೆ.

ಹೀಗೆ ಆಹಾರವನ್ನು ಹುಡುಕುವ, ಆಹಾರವನ್ನು ಗಟ್ಟಿಯಾಗಿ ಹಿಡಿಯುವ ಮತ್ತು ಹಿಡಿದ ಆಹಾರವನ್ನು ಹಕ್ಕಿ ತಿನ್ನುವ ಸಾಮರ್ಥ್ಯ ಇಲ್ಲವಾಗುತ್ತದೆ. ಈ ಹಂತದಲ್ಲಿ ಗಿಡುಗನ ಮುಂದೆ ಪರಿಹಾರವಾಗಿ ಮೂರು ಆಯ್ಕೆಗಳಿರುತ್ತವೆ.

1) ಒಂದು ಸನ್ಯಾಸಿಯಂತೆ ಎಲ್ಲವನ್ನೂ ತ್ಯಜಿಸಿ ದೇಹತ್ಯಾಗ ಮಾಡುವುದು.
2) ಇನ್ನೊಂದು ತನ್ನ ಜೀವಂತ ಪ್ರಾಣಿಯನ್ನು ಬೇಟೆಯಾಡಿ ತಿನ್ನುವ ಪ್ರವೃತ್ತಿಯನ್ನು ಬಿಟ್ಟು ರಣ ಹದ್ದುಗಳಂತೆ ಸತ್ತ ಶವಗಳನ್ನು ತಿನ್ನುವ ಆಯ್ಕೆ.
3) ಮೂರನೆಯ ಪರಿಹಾರದ ದಾರಿ ಅತೀ ಕಷ್ಟಕರವಾದದ್ದು. ಹಳೆಯದಾದ ತನ್ನ ಕಾಲಿನ ಉಗುರುಗಳು, ಬಾಗಿದ ಕೊಕ್ಕೆ ಮತ್ತು ಭಾರವಾದ ರೆಕ್ಕೆಗಳನ್ನು ಕಿತ್ತುಕೊಂಡು ಮೊದಲಿನಂತೆ ಸರಿ ಮಾಡಿಕೊಳ್ಳುವ ಪ್ರಯತ್ನ.

ಈ ಮೂರು ಆಯ್ಕೆಗಳಲ್ಲಿ ಗಿಡುಗ ಕಷ್ಟಕರವಾದ ಮೂರನೇ ದಾರಿಯನ್ನು ಆಯ್ಕೆ ಮಾಡಿಕೊಂಡು ಅತೀ ಎತ್ತರದ ಬೆಟ್ಟವನ್ನು ಹುಡುಕಿಕೊಂಡು ಹೋಗಿ ಅಲ್ಲಿ ಗಟ್ಟಿಯಾದ ಬಂಡೆಗಲ್ಲಿಗೆ ತನ್ನ ಕೊಕ್ಕಿನಿಂದ ಹೊಡೆಯಲು ಪ್ರಾರಂಭಿಸುತ್ತದೆ. ಈ ಪ್ರಕ್ರಿಯೆ ಅತ್ಯಂತ ನೋವಿನಿಂದ ಕೂಡಿರುತ್ತದೆ. ಆದರೂ ಆ ಗಿಡುಗ ತನ್ನ ಮೇಲಿನ ಬಾಗಿದ ಕೊಕ್ಕೆ ಮುರಿಯುವವರೆಗೆ ಕುಕ್ಕಿ ಕುಕ್ಕಿ ಸುಸ್ತಾಗುತ್ತದೆ. ಈ ಪ್ರಕ್ರಿಯೆಯಲ್ಲಿ ರಕ್ತ ಒಸರುತ್ತದೆ. ವಿಪರೀತ ನೋವಾಗುತ್ತದೆ. ಆದರೂ ಛಲ ಬಿಡದೆ ನೋವನ್ನು ನುಂಗಿ ಮುಂದುವರೆಸುತ್ತದೆ. ಆ ಕೊಕ್ಕೆಯನ್ನು ಮುರಿದುಕೊಂಡು ಹೊಸ ಕೊಕ್ಕೆ ಬೆಳೆಯುವವರೆಗೆ ಕಾಯುತ್ತದೆ.

ಹಾಗೆಯೇ ಕಾಲಿನ ಉಗುರುಗಳು ಕೀಳುವವರಿಗೆ ಕಾಲನ್ನು ಬಂಡೆಗೆ ಹೊಡೆಹೊಡೆದು ಬೆಳೆದ ಉಗುರುಗಳನ್ನು ಕಿತ್ತುಕೊಳ್ಳುತ್ತದೆ. ಮತ್ತೆ ಆ ಉಗುರುಗಳು ಬೆಳೆಯುವವರೆಗೆ ಕಾಯುತ್ತದೆ.


ಹೀಗೆ ಕೊಕ್ಕೆ ಮತ್ತು ಉಗುರು ಬೆಳೆದು ಮರು ಸ್ಥಾಪನೆ ಮಾಡಿಕೊಂಡ ನಂತರ ಅವುಗಳ ಸಹಾಯದಿಂದ ತನ್ನ ರೆಕ್ಕೆಗಳ ಒಂದೊಂದೇ ಪುಕ್ಕವನ್ನು ಹೆಕ್ಕಿ ಹೆಕ್ಕಿ ತೆಗೆದು ಹೊಸ ರೆಕ್ಕೆಗಾಗಿ ಕಾಯುತ್ತದೆ. ಹೊಸ ಪುಕ್ಕಗಳು ಬೆಳೆದು ಭಾರವಾಗಿ ಬೆಳೆದು ನಿಂತ ರೆಕ್ಕೆಯನ್ನು ಮೊದಲಿನಂತೆ ಹಾರಲು ಅನುವಾಗುವಂತೆ ಹಗುರಮಾಡಿಕೊಳ್ಳುತ್ತದೆ.

150 ದಿನಗಳ ಅತ್ಯಂತ ಕಷ್ಟ ಮತ್ತು ಕಾಯುವಿಕೆಯ ನಂತರ ಮತ್ತೆ ಅದು ತನ್ನ ಭವ್ಯ ಮತ್ತು ಎತ್ತರವಾದ ಹಾರುವಿಕೆಯನ್ನು ಪ್ರಾರಂಭಿಸುತ್ತದೆ. ಇಲ್ಲಿಂದ ಮತ್ತೆ ತನ್ನ ಶಕ್ತಿ, ಸಾಮರ್ಥ್ಯ ಘನತೆಯೊಂದಿಗೆ ಇನ್ನೂ 30 ವರ್ಷಗಳ ಕಾಲ ಬದುಕುತ್ತದೆ.

ನಾವು ಈಗಾಗಲೇ ಕೇಳಿದಂತೆ ಯಾರು ತನಗೆ ತಾನು ಸಹಾಯ ಮಾಡಿಕೊಳ್ಳುವುದಿಲ್ಲವೋ ಅಂತವನಿಗೆ ಆ ದೇವರೂ ಕೂಡ ಸಹಾಯ ಮಾಡಲಾರ. ಯಾರು ತನಗೆ ತಾನು ಸಹಾಯ ಮಾಡಿಕೊಳ್ಳುತ್ತಾನೆಯೋ ಅವನಿಗೆ ಆ ದೇವರು ಸಹಾಯ ಮಾಡದೇ ಇರಲಾರ. ನಮ್ಮ ಬದುಕಿನ ಸಂಘರ್ಷದ ಪ್ರಯತ್ನವನ್ನು ದೇವರು ಸುಳ್ಳು ಮಾಡಲಾರ. ಈ ಗಿಡುಗನ ಜೀವನದಿಂದ ತುಂಬಾ ಕಲಿಯುವುದಿದೆ.

ಬದುಕು ಸುಮ್ಮನಿರುವವರಿಗಲ್ಲ. ಇಚ್ಛಾಶಕ್ತಿ ಇರುವವರಿಗೆ. ಇಚ್ಛೆಯೊಂದಿದ್ದರೆ ಕಷ್ಟಗಳ ದಾರಿಯಿದ್ದರೂ ಬದುಕಿನ ಎತ್ತರಕ್ಕೆ ನಾವು ತಲುಪಿಯೇ ತೀರುತ್ತೇವೆ.

• ರೊ. ಎಂ. ಮಾಧವಾಚಾರ್




## *Happy Birthday Wishes*



*Sathyanarayana B.N.*
*13th Nov*



*Gopalakrishna Gupta Y.*
*16th Nov*



*Manujnath A.*
*16th Nov*

## ಚಿಂತನ

**ಸಮಾಜವನ್ನು ಒಳ್ಳೆಯ ರೀತಿಯಲ್ಲಿ ಮುನ್ನಡೆಸಲು ಏನು ಮಾಡಬೇಕು ಎನ್ನುವ ಪ್ರಶ್ನೆಗೆ ಒಬ್ಬ ಜ್ಞಾನಿ ಹೇಳಿದ ಸುಂದರವಾದ ನುಡಿ ಹೀಗಿದೆ...**
**"ಕಾಲು ಎಳೆಯುವುದನ್ನು ಬಿಟ್ಟು ಕೈಯನ್ನು ಎಳೆಯಬೇಕು"**
**ಅಗತ್ಯವಿರುವ ವ್ಯಕ್ತಿಗಳಿಗೆ ಸಹಾಯಹಸ್ತ ನೀಡಲು ನಾವೇ ಅವಕಾಶಗಳನ್ನು ಹುಡುಕಿಕೊಳ್ಳಬೇಕು.**
**ಇದೂ ಕೂಡ ಸಮಾಜ ಸೇವೆಯ ಒಂದು ಭಾಗವೇ ಅಲ್ಲವೇ...?**

**– ರೊ. ಕೆ. ಸೂರ್ಯನಾರಾಯಣ ಉಡುಪ**

To, *Book Post*

ಮುದ್ರಣ: ರಾಯಲ್ ಪ್ರಿಂಟರ್ಸ್, ಶಿವಮೊಗ್ಗ, 98862 73495